3. ಎಲ್ಲಾ ಖಚಿತಪಟ್ಟ ಪ್ರಕರಣಗಳಿಗೆ ತೀವ್ರ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

4. 2001ನೇ ಸಾಲಿನಲ್ಲಿ ಮಾರ್ಚ್ ಸುತ್ತಿನಲ್ಲಿ ಡಿ.ಡಿ.ಟಿ. ಕೀಟನಾಶಕ ಸಿಂಪರಣೆಯನ್ನು ಮಲೇರಿಯಾ ಪೀಡಿತ ಗ್ರಾಮಗಳಲ್ಲಿ ಮಾಡಲಾಗಿದೆ. ಆಗಸ್ಟ್ ಸುತ್ತಿನಲ್ಲಿ ಈ ಕಾರ್ಯಕ್ರಮಕ್ಕಾಗಿ 5 ಮೆಟ್ರಿಕ್ ಟನ್ ಡಿ.ಡಿ.ಟಿ.ಯನ್ನು ಪೂರೈಸಲಾಗಿದೆ ಹಾಗೂ ಸಿಂಪಡಣಾ ವೆಚ್ಚಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆ.

5. ರೋಗವಾಹಕ ಸೊಳ್ಳೆ ನಿಯಂತ್ರಣಕ್ಕಾಗಿ ತುರ್ತು ಕ್ರಮ ಕೈಗೊಳ್ಳಲು ಸಮಸ್ಯಾತ್ಮಕ ಗ್ರಾಮಗಳಲ್ಲಿ ಕೀಟನಾಶಕ ಭೂಮಿಕರಣ ಮಾಡಲಾಗುತ್ತಿದೆ.

6. ಜೈವಿಕ ಪರಿಸರ ನಿಯಂತ್ರಣ ಕ್ರಮಗಳ ಮೂಲಕ ಸೊಳ್ಳೆ ಉತ್ಪತ್ತಿ ತಾಣಗಳಲ್ಲಿ ಲಾರ್ವಾಹಾರಿ ಮೀನುಗಳನ್ನು ಬಿಟ್ಟು ಸೊಳ್ಳೆ ಉತ್ಪತ್ತಿಯನ್ನು ತಡೆಗಟ್ಟಲಾಗತ್ತಿದೆ.

ಕುಂದಾಪುರ ತಾಲ್ಲೂಕಿನ ಉಪ್ಪುಂದ ಪ್ರೌಢ ಶಾಲೆಗಳಿಗೆ ಕಂಪ್ಯೂಟರ್ ತರಬೇತುದಾರರನ್ನು ನೇಮಿಸುವ ಬಗ್ಗೆ

2529 (2979) **ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) :—** ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರಿ ಪ್ರೌಢ ಶಾಲೆಗಳಿಗೆ ಕಂಪ್ಯೂಟರ್ ಒದಗಿಸುತ್ತಿದ್ದು, ಎಷ್ಟು ವಿದ್ಯಾರ್ಥಿಗಳಿಗೆ ಎಷ್ಟು ಕಂಪ್ಯೂಟರ್ ಒದಗಿಸಲಾಗಿರುತ್ತದೆ. (ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಕಂಪ್ಯೂಟರ್ ಸಂಖ್ಯೆ ತಿಳಿಸುವುದು)

ಆ) ಪ್ರೌಢ ಶಾಲೆಗಳಲ್ಲಿ 850 ವಿದ್ಯಾರ್ಥಿಗಳಿದ್ದಲ್ಲಿ ಒದಗಿಸಲಾಗಿರುವ ಕಂಪ್ಯೂಟರ್ ಸಂಖ್ಯೆ ಎಷ್ಟು, ತರಬೇತುದಾರರ ಸಂಖ್ಯೆ ಎಷ್ಟು?

ಇ) ಕುಂದಾಪುರ ತಾಲ್ಲೂಕಿನ ಕುಂದಾಪುರ ತಾಲ್ಲೂಕಿನ ಉಪ್ಪುಂದ ಪ್ರೌಢ ಶಾಲೆಯಲ್ಲಿ 850 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದು 15 ಕಂಪ್ಯೂಟರ್‌ಗಳನ್ನು ಒದಗಿಸಲಾಗಿದ್ದು ಇಬ್ಬರು ತರಬೇತುದಾರರನ್ನು ನೇಮಿಸಿದೆ, ಈ ಕಂಪ್ಯೂಟರ್ ಮತ್ತು ತರಬೇತುದಾರರ ಸಂಖ್ಯೆಯನ್ನು ಹೆಚ್ಚಿಸಬಹುದೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಒಟ್ಟು 2.24 ಲಕ್ಷ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ ನೀಡಲಾಗುತ್ತಿದ್ದು 11,286 ಕಂಪ್ಯೂಟರ್‌ಗಳನ್ನು 1000 ಸರ್ಕಾರಿ ಪ್ರೌಢ ಶಾಲೆಗಳಿಗೆ

ಸರಬರಾಜು ಮಾಡಲಾಗಿರುತ್ತದೆ. ಶಾಲೆಗಳು ಮಕ್ಕಳ ಸಂಖ್ಯೆಗಳಿಗನುಗುಣವಾಗಿ ಎ, ಬಿ, ಸಿ ಎಂದು ವರ್ಗೀಕರಿಸಿದ್ದು 5 ವರ್ಷದ ಈ ಯೋಜನೆಗೆ ಪ್ರತಿ ಶಾಲೆಗೆ ಈ ಕೆಳಕಂಡ ಹಣ ವೆಚ್ಚ ಮಾಡಲಾಗುತ್ತದೆ.

1) ಕ್ಯಾಟಗರಿ ಎ - ರೂ.14.69 ಲಕ್ಷ
(150 ರವರೆಗೆ ವಿದ್ಯಾರ್ಥಿಗಳಿರುವ ಶಾಲೆಗಳು)

2) ಕ್ಯಾಟಗರಿ ಬಿ - ರೂ.19.10 ಲಕ್ಷ

(151 ರಿಂದ 250 ರವರೆಗೆ ವಿದ್ಯಾರ್ಥಿಗಳಿರುವ ಶಾಲೆಗಳು)

3) ಕ್ಯಾಟಗರಿ ಸಿ - ರೂ. 24.20 ಲಕ್ಷ
(250 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳು)

ಆ) 850 ವಿದ್ಯಾರ್ಥಿಗಳಿರುವ ಪ್ರತಿ ಸರ್ಕಾರಿ ಪ್ರೌಢಶಾಲೆಗೆ ಒಟ್ಟು 1 ಸರ್ವರ್ ಮತ್ತು 14 ವರ್ಕ್ ಸ್ಟೇಷನ್‌ಗಳನ್ನು ಒದಗಿಸುಲಾಗುತ್ತದೆ. ಪ್ರತೀ ಶಾಲೆಗೆ ಇಬ್ಬರು ಕಂಪ್ಯೂಟರ್ ತರಬೇತುದಾರರನ್ನು ನೇಮಿಸಲಾಗುತ್ತದೆ.

ಇ) ಚಾಲ್ತಿ ನಿಯಮಗಳಡಿಯಲ್ಲಿ ಅವಕಾಶವಿರುವುದಿಲ್ಲ.

ಬೈಂದೂರಿನಲ್ಲಿ ಶಿಕ್ಷಣಾಧಿಕಾರಿಗಳು ಕಛೇರಿಗೆ ಸಿಬ್ಬಂದಿ ನೇಮಕಾತಿ.

2530 (2980) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) :— ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಮಂಜೂರಾಗಿ ಪ್ರಾರಂಭಗೊಂಡಿದ್ದು ಇದಕ್ಕೆ ಸರಿಯಾದ ಸಿಬ್ಬಂದಿಗಳ ನೇಮಕಾತಿಯಾಗಿಲ್ಲದಿರುವುದಕ್ಕೆ ಕಾರಣವೇನು;

ಆ) ಹಾಗಿದ್ದಲ್ಲಿ ಸಿಬ್ಬಂದಿಗಳ ನೇಮಕಾತಿಯನ್ನು ಕೂಡಲೇ ಮಾಡಲಾಗುವುದೆ? ತೊಡಕುಗಳಿದ್ದಲ್ಲಿ ನಿಯೋಜನೆ ಮೂಲಕವಾದರೂ ಹುದ್ದೆಗಳನ್ನು ಭರ್ತಿಮಾಡಲಾಗುವುದೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಹೊಸದಾಗಿ ಬಿ.ಇ.ಓ. ಕಛೇರಿ ಪ್ರಾರಂಭವಾಗಿದ್ದು, ಈ ಕೆಳಕಂಡಂತೆ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ.